# ಜೆಎಸ್‌ಎಸ್ ಮಹಿಳಾ ಕಾಲೇಜು,ಕೊಳ್ಳೇಗಾಲ

## ಪ್ರಕಟಣೆಯ ಕೃಪೆಗಾಗಿ

ದಿನಾಂಕ : 12-07-2018

**ಜನಸಂಖ್ಯೆಯು ದೇಶಕ್ಕೆ ವರವೂ ಹೌದು – ಡಾ. ಎನ್ ಎಸ್ ಸತೀಶ್**

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ**

ಕೊಳ್ಳೇಗಾಲ: 12-07-2018 : ಒಂದು ನಾಣ್ಯಕ್ಕೆ ಎರಡು ಮುಖವಿರುವ ಹಾಗೆ ಜನಸಂಖ್ಯೆ ಬಾಹುಳ್ಯಕ್ಕೂ ಅನುಕೂಲ ಮತ್ತು ಅನಾನುಕೂಲ ಎಂಬ ಎರಡು ಮುಖಗಳುಂಟು. ಜನ ಸಂಖ್ಯೆಯು ದೇಶಕ್ಕೆ ವರವೂ ಹೌದು ಎಂಬುದನ್ನು ಜನಸಂಖ್ಯೆ ಹೆಚ್ಚಳದಿಂದ ಹೆಣಗಾಡುತ್ತಿದ್ದ ಚೀನಾ ದೇಶವು ಅದೇ ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಇಂದು ವಿಶ್ವದಲ್ಲಿನ ಬೃಹತ್ ಆರ್ಥಿಕ ಶಕ್ತಿಗಳಲ್ಲಿ ಒಂದೆನಿಸಿಕೊಂಡಿರುವುದರಿಂದ ಅರಿಯಬಹುದಾಗಿದೆ ಎಂದು ಚಾಮರಾಜನಗರ ಜೆಎಸ್‌ಎಸ್ ಕಾಲೇಜಿನ ಭೂಗೋಳಶಾಸ್ತ್ರ ಪ್ರಾಧ್ಯಾಪಕರಾದ ಡಾ. ಎನ್ ಎಸ್ ಸತೀಶ್ ರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗದ ವತಿಯಿಂದ "ವಿಶ್ವಜನಸಂಖ್ಯಾ ದಿನಾಚರಣೆ" ಅಂಗವಾಗಿ ಆಯೋಜಿಸಿದ್ದ "ಜನಸಂಖ್ಯೆ ಮತ್ತು ಆರ್ಥಿಕ ಅಭಿವೃದ್ಧಿ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಜನಸಂಖ್ಯೆ ಎಂದಾಕ್ಷಣ ಅದನ್ನೊಂದು ಸಮಸ್ಯೆಯಾಗಿಯೋ, ನಕರಾತ್ಮಕ ಅಂಶವಾಗಿಯೋ ಪರಿಗಣಿಸುತ್ತೇವೆ. ಆದರೆ ದೇಶದ ಯುವ ಸಂಖ್ಯೆ ಹೆಚ್ಚಿದಲ್ಲಿ ದೇಶದ ಆರ್ಥಿಕ ಸ್ಥಿತಿಯೂ ಉತ್ತಮವಾಗುತ್ತದೆ. ಡೇವಿಡ್ ಬ್ಲೂಮ್ ಪ್ರತಿಪಾದಿಸಿರುವಂತೆ ಜನಸಂಖ್ಯಾ ಲಾಭಾಂಶವು ಯಾವುದೇ ದೇಶದ ಕ್ಷಿಪ್ರ ಆರ್ಥಿಕ ಬೆಳವಣಿಗೆಗೆ ಹೆಚ್ಚು ಪೂರಕ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ್ ಜ್ಞಾನಾಧಾರಿಕ ಆರ್ಥಿಕ ಯುಗದಲ್ಲಿ ಕುಶಲ ಹಾಗೂ ಉದ್ಯೋಗಯೋಗ್ಯ ಮಾನವಶಕ್ತಿ ಬಹಳ ಮುಖ್ಯ. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಕೈಗಾರಿಕಾ ಉದ್ಯೋಗಗಳಿಗೆ ಅವಶ್ಯವಿರುವ ಕೌಶಲ್ಯತೆಯನ್ನು ಬೆಳೆಸುವ ಪಠ್ಯಕ್ರಮ ತೀರಾ ವಿರಳ. ಯುವ ಜನಾಂಗವನ್ನು ವಿದ್ಯಾವಂತರಾಗಿಸುವುದರ ಜತೆಜತೆಗೆ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ "ನೌಕರಿಯೋಗ್ಯ" ರನ್ನಾಗಿಯೂ ಮಾಡುವ ನಿಟ್ಟಿನಲ್ಲಿ ಕೌಶಲ್ಯ ವರ್ಧನೆಗೆ ಮುಂದಾಗಬೇಕು ಎಂದು ತಿಳಿಸುತ್ತ, ವಿಶ್ವ ಜನಸಂಖ್ಯೆ ದಿನಾಚರಣೆಯ ಹಿಂದಿನ ಮಹತ್ವವನ್ನು ವಿವರಿಸಿದರು.

ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀಮತಿ ಎ ಎಸ್ ಸ್ಮಿತಾ ಹಾಗೂ ಶ್ರೀ ಬಿ ಮಂಜುನಾಥ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು. ರಕ್ಷಿತ ಸ್ವಾಗತಿಸಿ, ವಂದಿಸಿದರು.

ಭೂಗೋಳಶಾಸ್ತ್ರ ವಿಭಾಗದ ವತಿಯಿಂದ “ವಿಶ್ವಜನಸಂಖ್ಯಾ ದಿನಾಚರಣೆ”. ಡಾ. ಎನ್ ಎಸ್ ಸತೀಶ್ ರವರು ಗಿಡಕ್ಕೆ ನೀರೆರೆಯುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಬಿ ಮಂಜುನಾಥ್, ಪ್ರಾಚಾರ್ಯ ಪ್ರೊ. ಉಮೇಶ್ ಹಾಗೂ ಶ್ರೀಮತಿ ಎ ಎಸ್ ಸ್ಮಿತಾ ರವರನ್ನು ಕಾಣಬಹುದು.



ಭೂಗೋಳಶಾಸ್ತ್ರ ವಿಭಾಗದ ವತಿಯಿಂದ “ವಿಶ್ವಜನಸಂಖ್ಯಾ ದಿನಾಚರಣೆ.” ಡಾ. ಎನ್ ಎಸ್ ಸತೀಶ್‌ರವರು “ಜನಸಂಖ್ಯೆ ಮತ್ತು ಆರ್ಥಿಕ ಅಭಿವೃದ್ಧಿ” ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಶ್ರೀ ಬಿ ಮಂಜುನಾಥ್, ಪ್ರಾಚಾರ್ಯ ಪ್ರೊ. ಉಮೇಶ್ ಹಾಗೂ ಶ್ರೀಮತಿ ಎ ಎಸ್ ಸ್ಮಿತಾ ರವರನ್ನು ಕಾಣಬಹುದು.



ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು.

